**ಕರ್ನಾಟಕ ಸರ್ಕಾರ**

ಸಂ.ಹಿಂವಕನಿ/ಡಿಬಿಟಿ/ಸಿಆರ್–12/2013–14

ಆಯುಕ್ತರ ಕಛೇರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ನಂ.16–ಡಿ, 3ನೇ ಮಹಡಿ, ದೇವರಾಜ ಅರಸು ಭವನ,
ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–52, ದಿನಾಂಕ: 12.03.2014

**ಡಿ.ಬಿ.ಟಿ ಸುತ್ತೋಲೆ–11**

**ವಿಷಯ: 2013–14ನೇ ಸಾಲಿನಲ್ಲಿ ಶುಲ್ಕ ವಿನಾಯಿತಿ ಸೌಲಭ್ಯವನ್ನು ಮಂಜೂರು ಮಾಡುವ ಕುರಿತು.**

ಉಲ್ಲೇಖ:
1) ಸರ್ಕಾರದ ಆದೇಶ ಸಂ.ಸಕಇ 357 ಬಿಎಂಎಸ್ 2012, ದಿನಾಂಕ 22.11.2012 ಹಾಗೂ ಆದೇಶ ಸಂ.ಹಿಂವಕ 72 ಬಿಎಂಎಸ್ 2014, ದಿನಾಂಕ 5.2.2014
2) ಸರ್ಕಾರದ ಆದೇಶ ಸಂ.ಹಿಂವಕ 589 ಬಿಎಂಎಸ್ 2013, ದಿನಾಂಕ 5.10.2013 ಹಾಗೂ ಮತ್ತು ತಿದ್ದುಪಡಿ ಆದೇಶ ದಿನಾಂಕ 27.1.2014 ಹಾಗೂ 20.2.2014
3) ಈ ಕಛೇರಿಯ ಬಿಡುಗಡೆ ಆದೇಶ ಸಂ.ಹಿಂವಕಇ/ವಿವೇ/ಸಿಆರ್–20/2013–14, ದಿನಾಂಕ 4.3.2014
4) ಸರ್ಕಾರದ ಹಣ ಬಿಡುಗಡೆ ಆದೇಶ ಸಂ.ಬಿಸಿಡಬ್ಲ್ಯೂ 754 ಬಿಎಂಎಸ್ 2013, ದಿನಾಂಕ 7.3.2014.
5) ಈ ಕಛೇರಿಯ ಹಣ ಬಿಡುಗಡೆ ಆದೇಶ ಸಂ.ಹಿಂವಕನಿ/ಶುವಿ/ಸಿಆರ್–10/2013–14, ದಿನಾಂಕ 7.3.2014.

*****

1. ಮೆಟ್ರಿಕ್–ನಂತರದ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಪಾವತಿಸಬೇಕಾದ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ, ಗ್ರಂಥಾಲಯ ಶುಲ್ಕ, ಪರೀಕ್ಷಾ ಶುಲ್ಕ ಇವುಗಳ ದರಗಳನ್ನು ಉಲ್ಲೇಖ (1)ರ ಸರ್ಕಾರದ ಆದೇಶಗಳಲ್ಲಿ ನಿಗದಿಪಡಿಸಲಾಗಿದೆ.

2. ಉಲ್ಲೇಖ (2)ರಲ್ಲಿನ ಸರ್ಕಾರದ ಆದೇಶದಲ್ಲಿ ಶುಲ್ಕ ವಿನಾಯಿತಿ ಯೋಜನೆಯ ಮಾರ್ಗಸೂಚಿಗಳನ್ನು ಪರಿಷ್ಕರಿಸಿ, ಹೊರಡಿಸಲಾಗಿದೆ. ಈ ಆದೇಶದಂತೆ 2013–14ನೇ ಸಾಲಿನಿಂದ ಶುಲ್ಕ ವಿನಾಯಿತಿಯನ್ನು ಶಿಕ್ಷಣ ಸಂಸ್ಥೆಗಳಿಗೆ ಪಾವತಿಸುವ ಬದಲು ಈ ಸೌಲಭ್ಯವನ್ನು ನೇರವಾಗಿ ಅರ್ಹ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಬೇಕಾಗಿದೆ.

3. ಅ) ಕೇಂದ್ರ ಸರ್ಕಾರ ಬಿಡುಗಡೆ ಮಾಡುವ ಮೊತ್ತ ಹಾಗೂ ರಾಜ್ಯದ ಪಾಲಿನ Committed Liability ಮೊತ್ತದ ಪಾವತಿಗೆ ಸಂಬಂಧಿಸಿದಂತೆ, ಆಯುಕ್ತಾಲಯದ ಉಪ ನಿರ್ದೇಶಕರು (ವಸತಿ ನಿಲಯ) ಇವರು ಶುಲ್ಕ ವಿನಾಯಿತಿ ಮತ್ತು Readers Charges ಮಂಜೂರು ಮಾಡುವ ಪ್ರಾಧಿಕಾರ ಆಗಿರುತ್ತಾರೆ ಹಾಗೂ ಜಂಟಿ ನಿರ್ದೇಶಕರು (ವಸತಿ ನಿಲಯ) ಇವರು ಮೇಲುರುಜು ಮಾಡುವ ಪ್ರಾಧಿಕಾರ ಆಗಿರುತ್ತಾರೆ.

   ಆ) ರಾಜ್ಯ ಸರ್ಕಾರದ ಅನುದಾನದಿಂದ ಪಾವತಿಸುವ ಮೊತ್ತಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಯು ಆಯಾ ಜಿಲ್ಲೆಯಲ್ಲಿ ಶುಲ್ಕ ವಿನಾಯಿತಿ ಮತ್ತು Readers Charges ಮಂಜೂರು ಮಾಡುವ ಪ್ರಾಧಿಕಾರ ಆಗಿರುತ್ತಾರೆ ಹಾಗೂ ಆಯಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೇಲುರುಜು ಮಾಡುವ ಪ್ರಾಧಿಕಾರ ಆಗಿರುತ್ತಾರೆ.

4. ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಗಳನ್ನು ಯಾವ ರೀತಿ ಪರಿಶೀಲನೆ ಮಾಡಬೇಕು ಎಂಬ ಬಗ್ಗೆ ಈಗಾಗಲೇ ಹಲವು ಸುತ್ತೋಲೆಗಳಲ್ಲಿ ತಿಳಿಸಲಾಗಿದೆ.

5. ಅ) ರಾಜ್ಯವಲಯ ಯೋಜನೆ ಲೆಕ್ಕಶೀರ್ಷಿಕೆ 2225-03-277-02-51 ಅಡಿಯಲ್ಲಿ ಗುಂಪು-ಎ ಕೋರ್ಸುಗಳಿಗೆ ಶುಲ್ಕ ವಿನಾಯಿತಿ ನೀಡುವ ಸಂಬಂಧ ರೂ.5792.15 ಲಕ್ಷಗಳನ್ನು ಆಯುಕ್ತಾಲಯಕ್ಕೆ ಬಿಡುಗಡೆ ಮಾಡಲಾಗಿದೆ.

ಆ) ಜಿಲ್ಲಾವಲಯ ಯೋಜನೇತರ ಲೆಕ್ಕಶೀರ್ಷಿಕೆ 2225-00-103-0-28 ರಡಿ ರೂ.103.47 ಕೋಟಿಗಳನ್ನು ಒದಗಿಸಲಾಗಿದ್ದು, ಇದರ ಪೈಕಿ ರೂ.70.00 ಕೋಟಿಯನ್ನು ಆಯಾ ಜಿಲ್ಲೆಗಳಿಗೆ ನೇರವಾಗಿ ಆರ್ಥಿಕ ಇಲಾಖೆ ಬಿಡುಗಡೆ ಮಾಡಿದೆ. ರೂ.33.47 ಕೋಟಿಯನ್ನು ಈ ಕಛೇರಿಯ ಆದೇಶ ಸಂ.ಹಿಂವಕನಿ/ಶುವಿ/ಸಿಆರ್-10/2013-14, ದಿನಾಂಕ 7.3.2014ರಂದು ಅರ್ಹ ಅರ್ಜಿಗಳ ಸಂಖ್ಯೆಗನುಸಾರವಾಗಿ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ ಹಾಗೂ ಪ್ರತಿ ಜಿಲ್ಲೆಗೆ ಈ ಬಾಬ್ತು ಒಟ್ಟು ಲಭ್ಯವಾಗುವ ಮೊತ್ತವನ್ನು ಸಹ ತಿಳಿಸಲಾಗಿದೆ.

6. **ಶುಲ್ಕ ವಿನಾಯಿತಿ ಮಂಜೂರು ಮಾಡುವಲ್ಲಿ, ಪ್ರವರ್ಗವಾರು ಮತ್ತು ಕೋರ್ಸಿನ ಗುಂಪುವಾರು ಅನುದಾನ ಹಂಚಿಕೆ ವಿಧಾನ:**

1) **ಭಾರತ ಸರ್ಕಾರ ನೀಡುವ ಅನುದಾನ ಮತ್ತು ರಾಜ್ಯ ಸರ್ಕಾರದ Committed Liability ಭಾಗವನ್ನು ಹಂಚಿಕೆ ಮಾಡುವ ವಿಧಾನ:**

(i) ಗುಂಪು-ಎ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಹಾಗೂ ಕುಟುಂಬದ ವಾರ್ಷಿಕ ವರಮಾನ ರೂ.1.00 ಲಕ್ಷ ಮಿತಿಯೊಳಗಿರುವ, ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ, 3ಬಿ ಮತ್ತು ಭಾರತ ಸರ್ಕಾರ ಅಧಿಸೂಚಿಸಿರುವ ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿದ ವಿದ್ಯಾರ್ಥಿಗಳಿಗೆ ಮಾತ್ರ ಉಪಯೋಗಿಸಬೇಕು.

(ii) ಲಭ್ಯವಿರುವ ಅನುದಾನದ ಪೈಕಿ, ನಿಗದಿತ ಮೆರಿಟ್ ಮತ್ತು ಕುಟುಂಬದ ವಾರ್ಷಿಕ ವರಮಾನ ರೂ.1.00 ಲಕ್ಷ ಮಿತಿಯೊಳಗಿರುವ, ಪ್ರವರ್ಗ-1ರ ಎಲ್ಲಾ ಗುಂಪು-ಎ ಕೋರ್ಸಿನ ವಿದ್ಯಾರ್ಥಿಗಳಿಗೆ, **ಮೊದಲನೆಯ ಆಧ್ಯತೆಯ** ಮೇಲೆ ಸಮಿತಿಯು ನಿರ್ಧರಿಸಿದ ದರಗಳಂತೆ ಶುಲ್ಕ ವಿನಾಯಿತಿ ನೀಡಬೇಕು.

(iii)ಎಲ್ಲಾ ಅರ್ಹ ಅಂಧ ವಿದ್ಯಾರ್ಥಿಗಳಿಗೆ, Readers charges ಅನ್ನು ಹಾಗೂ ಸಮಿತಿಯು ನಿರ್ಧರಿಸಿದ ದರಗಳಂತೆ ಶುಲ್ಕಗಳನ್ನು **ದ್ವಿತೀಯ ಆಧ್ಯತೆ** ಮೇಲೆ ಮಂಜೂರು ಮಾಡಬೇಕು.

(IV) ರಾಜ್ಯ ಸರ್ಕಾರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಇಲ್ಲದ, ಆದರೆ ಕೇಂದ್ರ ಸರ್ಕಾರದ ಓ.ಬಿ.ಸಿ ಪಟ್ಟಿಯಲ್ಲಿ ಇರುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ನಾಲ್ಕನೇ ಆಧ್ಯತೆಯಲ್ಲಿ ಮಂಜೂರು ಮಾಡಬೇಕು.

(V) ಉಳಿದ ಮೊತ್ತವನ್ನು ಪ್ರವರ್ಗವಾರು ಈ ಕೆಳಗಿನ ಶೇಕಡವಾರು ಪ್ರಕಾರ ಹಂಚಿಕೆ ಮಾಡಬೇಕು.

ಪ್ರವರ್ಗ-2ಎ – 62%
ಪ್ರವರ್ಗ-3ಎ – 17%
ಪ್ರವರ್ಗ-3ಬಿ – 21%
**ಒಟ್ಟು – 100%**

2) **ಕರ್ನಾಟಕ ಸರ್ಕಾರ ನೀಡುವ ಅನುದಾನದ ಹಂಚಿಕೆ**

(ಅ) ಗುಂಪು-ಎ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಹಾಗೂ ರೂ.1.00 ಲಕ್ಷಕ್ಕೆ ಮೇಲ್ಪಟ್ಟು ಹಾಗೂ ರೂ.2.50 ಲಕ್ಷಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ವರಮಾನ ಹೊಂದಿರುವ ಹಿಂದುಳಿದ ವರ್ಗಗಳ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ಹಾಗೂ ಕುಟುಂಬದ ವಾರ್ಷಿಕ ವರಮಾನ ರೂ.1.00 ಲಕ್ಷದ ಮಿತಿಯೊಳಗೆ ಇರುವ ಗುಂಪು-ಬಿ, ಗುಂಪು-ಸಿ ಮತ್ತು ಗುಂಪು-ಡಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿ ಗೆ ಸೇರಿದ ವಿದ್ಯಾರ್ಥಿಗಳಿಗೆ ಮತ್ತು ಎಲ್ಲಾ ಗುಂಪುಗಳ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಇತರೆ ಜಾತಿ/ಧರ್ಮದ ವಿದ್ಯಾರ್ಥಿಗಳಿಗೆ, (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ಉಪಯೋಗಿಸಬೇಕು.

(ಆ) ಕರ್ನಾಟಕ ಸರ್ಕಾರ ನೀಡುವ ಅನುದಾನದ ಹಂಚಿಕೆಯ ಆದ್ಯತೆಗಳು

(i) ನಿಗದಿತ ಮೆರಿಟ್ ಮತ್ತು ರೂ.1.00 ಲಕ್ಷಕ್ಕೆ ಮೇಲ್ಪಟ್ಟು ಹಾಗೂ ರೂ.2.50 ಲಕ್ಷಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ವರಮಾನ ಹೊಂದಿರುವ, ಗುಂಪು-ಎ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ, **ಎಲ್ಲಾ ಪ್ರವರ್ಗ-1ರ** ವಿದ್ಯಾರ್ಥಿಗಳಿಗೆ, ಹಾಗೂ ರೂ.2.50 ಲಕ್ಷ ಕುಟುಂಬದ ವಾರ್ಷಿಕ ಆದಾಯಮಿತಿಯಿರುವ, ಗುಂಪು-ಬಿ, ಗುಂಪು-ಸಿ ಮತ್ತು ಗುಂಪು-ಡಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಪ್ರವರ್ಗ-1ರ ಎಲ್ಲಾ ವಿದ್ಯಾರ್ಥಿಗಳಿಗೆ, **ಮೊದಲನೆಯ ಆದ್ಯತೆಯ** ಮೇಲೆ ಶುಲ್ಕ ವಿನಾಯಿತಿ ನೀಡಬೇಕು.

(ii) ನಿಗದಿತ ಮೆರಿಟ್ ಮತ್ತು ರೂ.1.00 ಲಕ್ಷ ಆದಾಯ ಮಿತಿಯೊಳಗಿರುವ ಹಾಗೂ ಗುಂಪು-ಬಿ, ಗುಂಪು-ಸಿ, ಮತ್ತು ಗುಂಪು-ಡಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಎಲ್ಲಾ ಅರ್ಹ ಅಂಧ ವಿದ್ಯಾರ್ಥಿಗಳಿಗೆ, Readers charges ಅನ್ನು ಹಾಗೂ ರಾಜ್ಯ ಸಮಿತಿಯು ನಿರ್ಧರಿಸಿದ ದರಗಳಂತೆ ಶುಲ್ಕಗಳನ್ನು **ದ್ವಿತೀಯ ಆದ್ಯತೆ** ಮೇಲೆ ಮಂಜೂರು ಮಾಡಬೇಕು.

(iii) ಮೇಲಿನ (i) ಮತ್ತು (ii) ಕ್ಕೆ ಬೇಕಾಗುವ ಮೊತ್ತವನ್ನು ಹೊರತುಪಡಿಸಿ, ಉಳಿದ ಮೊತ್ತವನ್ನು ಗುಂಪು-ಬಿ, ಗುಂಪು-ಸಿ, ಮತ್ತು ಗುಂಪು-ಡಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಪ್ರವರ್ಗ-2ಎ, 3ಎ, 3ಬಿ ಮತ್ತು ಇತರೆ ಸಮುದಾಯಗಳ ಮತ್ತು **ಇತರೆ ಓ.ಬಿ.ಸಿ** ವಿದ್ಯಾರ್ಥಿಗಳಿಗೆ ಈ ಕೆಳಗಿನ ಪ್ರಕಾರ ಶೇಕಡಾವಾರು ಹಂಚಿಕೆ ಮಾಡಬೇಕು.

| | |
|---|---|
| ಪ್ರವರ್ಗ-2ಎ | - 58% |
| ಪ್ರವರ್ಗ-3ಎ | - 16% |
| ಪ್ರವರ್ಗ-3ಬಿ | - 20% |
| ಇತರೆ ಸಮುದಾಯದವರು | - 05% |
| ಇತರೆ ಓಬಿಸಿ (OTH-OBCs) | - 01% |
| **ಒಟ್ಟು** | **- 100%** |

(iv) ಈ ಮೇಲಿನಂತೆ ಪ್ರವರ್ಗವಾರು ಹಂಚಿಕೆ ಮಾಡಿದ ನಂತರ, ಪ್ರತಿ ಪ್ರವರ್ಗವಾರು ಹಂಚಿಕೆ ಮಾಡಲಾದ ಮೊತ್ತವನ್ನು ಕೋರ್ಸಿನ ಗುಂಪುವಾರು ಸ್ವೀಕರಿಸಲಾಗುವ ಅರ್ಜಿಗಳ ಸಂಖ್ಯೆಗೆ ಅನುಗುಣವಾಗಿ Weighted Average ಪ್ರಕಾರ ಹಂಚಿಕೆ ಮಾಡಬೇಕು.

(ಇ) ಆ ಆರ್ಥಿಕ ವರ್ಷಕ್ಕೆ ಲಭ್ಯವಾಗುವ ಅನುದಾನದ ಮಿತಿಗೆ ಒಳಪಟ್ಟು, ಅರ್ಹತೆ ಮತ್ತು ಆದಾಯಕ್ಕೆ (Merit cum Means) ಅನುಗುಣವಾಗಿ ಮಂಜೂರು ಮಾಡಬೇಕು.

**7. ಶುಲ್ಕ ವಿನಾಯಿತಿ ಮಂಜೂರು ಮಾಡುವಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ:**

**ಅ. ರಾಜ್ಯವಲಯ ಯೋಜನೆಯಡಿಯಲ್ಲಿ:**

1) ಉಪ ನಿರ್ದೇಶಕರು (ವಸತಿ ನಿಲಯ) ಇವರು ಗ್ರೂಪ್-ಎ ಕೋರ್ಸಿನ ಶುಲ್ಕ ವಿನಾಯಿತಿ ಮಂಜೂರಾತಿಗೆ ಉಲ್ಲೇಖ (3)ರಲ್ಲಿನ ಆದೇಶದಲ್ಲಿ ಹಂಚಿಕೆ ಮಾಡಲಾದ ರೂ.5792.15 ಲಕ್ಷಗಳನ್ನು ಇ-ಪಾಸ್ ಪೋರ್ಟಲ್‌ಗೆ ಹಾಗೂ ಖಜಾನೆ ಎನ್.ಎಂ.ಸಿಗೆ ಅಪ್‌ಲೋಡ್ ಮಾಡಬೇಕು.
2) ಪ್ರವರ್ಗ-2ಎ, 3ಎ ಮತ್ತು 3ಬಿ ಗೆ ಹಂಚಿಕೆ ಮಾಡಲಾದ ಮೊತ್ತಕ್ಕೆ ಸಂಬಂಧಿಸಿದಂತೆ, ಯಾವುದಾದರೂ ಒಂದು ಪ್ರವರ್ಗದಲ್ಲಿ ಲಭ್ಯವಿರುವ ಅನುದಾನವು ಆ ಪ್ರವರ್ಗದಲ್ಲಿ ಸ್ವೀಕರಿಸಿದ ಅರ್ಜಿಗಳ ಬೇಡಿಕೆಯ ಮೊತ್ತಕ್ಕಿಂತ ಹೆಚ್ಚು ಇದ್ದಲ್ಲಿ, ಅಂತಹ ಪ್ರವರ್ಗಕ್ಕೆ ಹಂಚಿಕೆಯಾಗಿರುವ ಅಧಿಕ (Surplus) ಮೊತ್ತವನ್ನು, ಬೇಡಿಕೆಗಿಂತ ಅನುದಾನ ಕೊರತೆ (Deficit) ಇರುವ ಪ್ರವರ್ಗಕ್ಕೆ **ನಿಗದಿತ ಮೀಸಲಾತಿ ಅನುಪಾತದಂತೆ** ಹಂಚಿಕೆ ಮಾಡಬೇಕು.

3) ಗುಂಪು-ಎ ಕೋರ್ಸುಗಳ ಪೈಕಿ, ಒಂದೇ ದರದ ಶುಲ್ಕವನ್ನು ಹೊಂದಿರುವ ಕೋರ್ಸುಗಳಿಗೆ ಹಂಚಿಕೆ ಮಾಡಲ್ಪಟ್ಟ ಅನುದಾನ ಬೇಡಿಕೆ ಮೊತ್ತಕ್ಕಿಂತ ಹೆಚ್ಚಿಗೆ ಇದ್ದಲ್ಲಿ, ಇಂತಹ ಅಧಿಕ (Surplus) ಮೊತ್ತವನ್ನು ಕೊರತೆ (Deficit) ಬೀಳುವ (ಒಂದೇ ದರದ ಶುಲ್ಕಗಳನ್ನು ಹೊಂದಿರುವ) ಕೋರ್ಸುಗಳಿಗೆ **ಶೇಕಡ ಕೊರತೆಯನ್ನಾಧರಿಸಿ,** ಮರು ಹಂಚಿಕೆ ಮಾಡಬೇಕು.

4) ಇ-ಪಾಸ್ ಪೋರ್ಟಲ್ ನಿಂದ ಮಂಜೂರಾತಿ ಆದೇಶ, ವಿದ್ಯಾರ್ಥಿಗಳ ಮಂಜೂರಾತಿ ಪಟ್ಟಿ ಕುರಿತ ಅನುಬಂಧಗಳು ಮತ್ತು ಬಿಲ್ಲನ್ನು ಉಪ ನಿರ್ದೇಶಕರು (ವಸತಿ ನಿಲಯ) ಇವರು ಇವುಗಳನ್ನು ಡೌನ್‌ಲೋಡ್ ಮಾಡಿಕೊಂಡು, ನಿಯಮಾನುಸಾರ ಪರಿಶೀಲನೆ ಮಾಡಿ, ಮಂಜೂರಾತಿ ಆದೇಶ ಮತ್ತು ಅನುಬಂಧಗಳನ್ನು ಸಹಿ ಮಾಡಿ ಜಂಟಿ ನಿರ್ದೇಶಕರು (ವಸತಿ ನಿಲಯ) ಇವರು ವಿದ್ಯಾರ್ಥಿಗಳ ಪಟ್ಟಿಗೆ ಮಾಡಿದ ಮೇಲುಸಹಿಯೊಂದಿಗೆ ರಾಜ್ಯ ಹುಜೂರು ಖಜಾನೆಗೆ E.C.S/NEFT ಮೂಲಕ ಪಾವತಿಗಾಗಿ ಸಲ್ಲಿಸಿ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೇಂದ್ರ ಕಛೇರಿ, ಕೆಂಪೇಗೌಡ ರಸ್ತೆ ಇವರ ಹೆಸರಿನಲ್ಲಿ ಚೆಕ್ ಪಡೆಯಬೇಕು.

5) ಉಪ ನಿರ್ದೇಶಕರು (ವಸತಿನಿಲಯ) ಇವರು ರಾಜ್ಯ ಹುಜೂರು ಖಜಾನೆಯಿಂದ ಪಡೆದ ಚೆಕ್ ಅನ್ನು, ಶುಲ್ಕ ವಿನಾಯಿತಿ ಮಂಜೂರಾತಿ ಪಡೆದ ಗ್ರೂಪ್-ಎ ಕೋರ್ಸಿನ ಬ್ಯಾಂಕ್‌ವಾರು ವಿದ್ಯಾರ್ಥಿಗಳ ಪಟ್ಟಿಯನ್ನು (ಡೌನ್‌ಲೋಡ್ ಮಾಡಿಕೊಳ್ಳಲಾದ ಅನುಬಂಧ) ಯೊಂದಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೇಂದ್ರ ಕಛೇರಿ, ಕೆಂಪೇಗೌಡ ರಸ್ತೆ ಇವರಿಗೆ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಮಾಡುವುದಕ್ಕಾಗಿ ಸಲ್ಲಿಸುವುದು.

**ಆ. ಜಿಲ್ಲಾವಲಯ ಯೋಜನೇತರದಡಿಯಲ್ಲಿ:**

1) ಶುಲ್ಕ ವಿನಾಯಿತಿ ಮಂಜೂರಾತಿಗೆ ಜಿಲ್ಲಾವಲಯ ಯೋಜನೇತರ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಹಾಗೂ ಆಯುಕ್ತರ ಕಛೇರಿಯಿಂದ ಹೆಚ್ಚುವರಿಯಾಗಿ ಬಿಡುಗಡೆ ಮಾಡಿರುವ ಅನುದಾನವನ್ನು ಕೂಡಲೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಂದ ಬಿಡುಗಡೆ ಮಾಡಿಸಿಕೊಳ್ಳತಕ್ಕದ್ದು.

2) ಈ ಸುತ್ತೋಲೆಗೆ ಲಗತ್ತಿಸಿರುವ ಅನುಬಂಧ-1ರಲ್ಲಿ ಕಾಣಿಸಿರುವಂತೆ ಜಿಲ್ಲಾವಾರು ಲಭ್ಯವಿರುವ ಅನುದಾನವನ್ನು ಇ-ಪಾಸ್ ಪೋರ್ಟಲ್‌ಗೆ ಅಪ್‌ಲೋಡ್ ಮಾಡಬೇಕು.

3) ಉಲ್ಲೇಖ (2)ರಲ್ಲಿನ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಿರುವ ಆದ್ಯತೆಯನ್ನಾಧರಿಸಿ, ವಿವಿಧ ಮೀಸಲಾತಿ ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ವ್ಯಾಸಂಗ ಮಾಡುವ ವಿವಿಧ ಕೋರ್ಸುಗಳಿಗೆ ಅನುದಾನ ಹಂಚಿಕೆ ಮಾಡಬೇಕು.

4) ಈ ಮೇಲಿನಂತೆ ಒಂದು ಜಿಲ್ಲೆಯಲ್ಲಿನ ಅನುದಾನದಲ್ಲಿ ಪ್ರತಿಯೊಂದು ವರ್ಗಕ್ಕೆ ಅನುದಾನವನ್ನು ಹಂಚಿಕೆ ಮಾಡಲ್ಪಟ್ಟ ನಂತರ, ಯಾವುದಾದರೂ ಒಂದು ಪ್ರವರ್ಗದಲ್ಲಿ ಲಭ್ಯವಿರುವ ಅನುದಾನವು ಆ ಪ್ರವರ್ಗದಲ್ಲಿ ಸ್ವೀಕರಿಸಿದ ಅರ್ಜಿಗಳ ಬೇಡಿಕೆಯ ಮೊತ್ತಕ್ಕಿಂತ ಹೆಚ್ಚು ಇದ್ದಲ್ಲಿ, ಅಂತಹ ಪ್ರವರ್ಗಕ್ಕೆ ಹಂಚಿಕೆಯಾಗಿರುವ ಅಧಿಕ (Surplus) ಮೊತ್ತವನ್ನು, ಬೇಡಿಕೆಗಿಂತ ಅನುದಾನ ಕೊರತೆ (Deficit) ಇರುವ ಪ್ರವರ್ಗಕ್ಕೆ **ನಿಗದಿತ ಮೀಸಲಾತಿ ಅನುಪಾತದಂತೆ** ಹಂಚಿಕೆ ಮಾಡಬೇಕು.

5) ಅಂತಿಮವಾಗಿ ಮೀಸಲಾತಿ ಪ್ರವರ್ಗಗಳಿಗೆ ಅನುದಾನ ಹಂಚಿಕೆ ಮಾಡಲ್ಪಟ್ಟ ನಂತರ, ಪ್ರತಿಯೊಂದು ಪ್ರವರ್ಗಕ್ಕೆ ಹಂಚಿಕೆ ಮಾಡಲಾದ ಅನುದಾನವನ್ನು ಗ್ರೂಪ್-ಬಿ, ಸಿ, ಡಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಹಾಗೂ ರೂ.1.00 ಲಕ್ಷ ಮತ್ತು ಅದಕ್ಕಿಂತ ಕುಟುಂಬದ ವಾರ್ಷಿಕ ವರಮಾನ ಕಡಿಮೆ ಇರುವ ವಿದ್ಯಾರ್ಥಿಗಳಿಗೆ ಪ್ರತಿಯೊಂದು ಕೋರ್ಸು ಗುಂಪಿನಲ್ಲಿ ಸ್ವೀಕೃತವಾದ ಅರ್ಜಿಗಳ ಬೇಡಿಕೆಯ (Weighted Average) ಆಧಾರದ ಮೇಲೆ ಮರು ಹಂಚಿಕೆ ಮಾಡಬೇಕು.

6) ಒಂದು ವೇಳೆ ಯಾವುದಾದರೂ ಕೋರ್ಸಿನ ಗುಂಪಿಗೆ ಹಂಚಿಕೆ ಮಾಡಲ್ಪಟ್ಟ ಅನುದಾನ ಬೇಡಿಕೆ ಮೊತ್ತಕ್ಕಿಂತ ಹೆಚ್ಚಿಗೆ ಇದ್ದಲ್ಲಿ, ಇಂತಹ ಅಧಿಕ (Surplus) ಮೊತ್ತವನ್ನು ಕೊರತೆ (Deficit) ಬೀಳುವ ಕೋರ್ಸಿನ ಗುಂಪಿಗೆ **ಶೇಕಡ ಕೊರತೆಯನ್ನಾಧರಿಸಿ,** ಮರು ಹಂಚಿಕೆ ಮಾಡಬೇಕು.

7) ಇ–ಪಾಸ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಂಡ ಮಂಜೂರಾತಿ ಆದೇಶ, ವಿದ್ಯಾರ್ಥಿಗಳ ವಿವರಗಳುಳ್ಳ ಅನುಬಂಧ ಹಾಗೂ KFC-32(A) ನಮೂನೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಇವರು ನಿಯಮಾನುಸಾರ ಪರಿಶೀಲನೆ ಮಾಡಿ, ಸಹಿ ಮಾಡಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಅವರ ಮೇಲುಸಹಿ ಪಡೆದು ಖಜಾನೆಗೆ ಸಲ್ಲಿಸುವುದು.

8) ಜಿಲ್ಲೆಯಲ್ಲಿನ ವಿದ್ಯಾರ್ಥಿಗಳು ಬೇರೆ ಬೇರೆ ಬ್ಯಾಂಕುಗಳ ಶಾಖೆಗಳಲ್ಲಿ ಹೊಂದಿರುವ ಬ್ಯಾಂಕ್ ಅಕೌಂಟ್‌ಗೆ ಸಂಬಂಧಿಸಿದಂತೆ, ಬ್ಯಾಂಕ್‌ವಾರು ಮೊತ್ತಕ್ಕೆ ತ:ಖ್ತೆಯನ್ನು KFC-32(A) ನಮೂನೆ ಬಿಲ್ಲನೊಂದಿಗೆ ಖಜಾನೆಗೆ ಸಲ್ಲಿಸುವುದು.

9) ಖಜಾನೆಯಿಂದ ಬ್ಯಾಂಕ್‌ವಾರು ಸ್ವೀಕೃತವಾದ ಚೆಕ್‌ಗಳನ್ನು ಜಿಲ್ಲಾ ಕೇಂದ್ರದಲ್ಲಿನ ಸಂಬಂಧಿಸಿದ ಬ್ಯಾಂಕ್‌ಗೆ ಶುಲ್ಕ ವಿನಾಯಿತಿ ಸೌಲಭ್ಯ ಮಂಜೂರಾದ ವಿದ್ಯಾರ್ಥಿಗಳ ವಿವರವುಳ್ಳ ಅನುಬಂಧದೊಂದಿಗೆ E.C.S/NEFT ಮೂಲಕ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲು ಸಲ್ಲಿಸಬೇಕು.

10) ಯಾವುದಾದರು ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ, ಮಂಜೂರಾದ ಶುಲ್ಕ ವಿನಾಯಿತಿ ಮೊತ್ತ ಪಾವತಿಯಾಗದೇ ಬ್ಯಾಂಕ್‌ಗಳಲ್ಲಿ ಉಳಿಯುವ ಹಣವನ್ನು ಇಲಾಖೆಯ ಲೆಕ್ಕಶೀರ್ಷಿಕೆ 0250-00-102-0-2, Receipts from Department of Backward Classes & Minorities including Undisbursed Scholarships and Loss of Fee Income Grants" ಗೆ ಚಲನ್ ಮೂಲಕ ಜಮಾ ಮಾಡುವ ಕ್ರಮ ಕೈಗೊಳ್ಳುವುದು.

8. ಇದರೊಂದಿಗೆ ಇ–ಪಾಸ್ ಪೋರ್ಟಲ್‌ನಿಂದ ಜಿಲ್ಲಾ ಕಛೇರಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬೇಕಾದ ಮಂಜೂರಾತಿ ಆದೇಶ, ಅನುಬಂಧ, ಬಿಲ್ ಫಾರಂ KFC-32(A) ಮತ್ತು ಸಿ.ಟಿ.ಎಸ್ ನಮೂನೆಗಳನ್ನು ಮಾಹಿತಿಗಾಗಿ ಲಗತ್ತಿಸಿದೆ.

9. ಸಂಬಂಧಿಸಿದ ಕಾಲೇಜು ಪ್ರಾಂಶುಪಾಲರು ಶುಲ್ಕ ವಿನಾಯಿತಿ ಮಂಜೂರು ಮಾಡಲ್ಪಟ್ಟ ವಿದ್ಯಾರ್ಥಿಗಳ ಪಟ್ಟಿಯನ್ನು ಇ–ಪಾಸ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಂಡು, ಕಾಲೇಜಿನ ಸೂಚನಾ ಫಲಕದಲ್ಲಿ ವಿದ್ಯಾರ್ಥಿಗಳ ಮಾಹಿತಿಗಾಗಿ ಪ್ರಕಟಿಸಬೇಕು.

12/3/14

**ಆಯುಕ್ತರು**
**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**
**ಬೆಂಗಳೂರು.**

12/3

**ಇವರಿಗೆ:**

ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ

**ಪ್ರತಿಯನ್ನು:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ – ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಮೂಲಕ.
2. ಸಂಬಂಧಿಸಿದ ಕಾಲೇಜು ಪ್ರಾಂಶುಪಾಲರಿಗೆ – ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಮೂಲಕ.
3. ಜಂಟಿ ನಿರ್ದೇಶಕರು (ವಸತಿನಿಲಯ), ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ಉಪ ನಿರ್ದೇಶಕರು (ವಸತಿನಿಲಯ), ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ರಾಜ್ಯದ ಎಲ್ಲಾ ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳಿಗೆ – ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಮೂಲಕ.
6. ಲೆಕ್ಕಾಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
7. ಶ್ರೀ ಬಿ.ನಾರಾಯಣಸ್ವಾಮಿ, ಪ್ರ.ದ.ಸ, (ಹಾಲಿ ಸಿ.ಜಿ.ಜಿ ಹೈದರಾಬಾದ್ ಕ್ಯಾಂಪ್)
8. ಡಿ.ಬಿ.ಟಿ ಮತ್ತು ವಿದ್ಯಾರ್ಥಿವೇತನ ಶಾಖೆಗಳ ಪ್ರತಿ.

**E:\Fee Concession- Group-A.docx**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಡಿಬಿಟಿ ಸುತ್ತೋಲೆ-11, ದಿನಾಂಕ 12.3.2014ಕ್ಕೆ ಅನುಬಂಧ

ಜಿಲ್ಲಾವಲಯ ಯೋಜನೇತರ ಲೆಕ್ಕಶೀರ್ಷಿಕೆ 2225-00-103-0-28ರಡಿ ಶುಲ್ಕವಿನಾಯಿತಿ ಯೋಜನೆಗೆ ಲಭ್ಯವಿರುವ ಜಿಲ್ಲಾವಾರು ಅನುದಾನದ ವಿವರ

(Rs. In lakhs)

| S.No | District Code | District | District Sector | | Total |
|---|---|---|---|---|---|
| | | | Budget 2013-14 | Lumpsum ಮೊತ್ತದಲ್ಲಿ ದಿನಾಂಕ 7.3.2014ರ ಆದೇಶದಲ್ಲಿ ಬಿಡುಗಡೆ ಆಗಿರುವುದು | |
| 1 | 2 | 3 | 4 | 5 | 6 |
| 1 | 401 | BANGALORE URBAN | 952.00 | 227.04 | 1179.04 |
| 2 | 402 | BANGALORE RURAL | 71.00 | 42.18 | 113.18 |
| 3 | 403 | CHITRADURGA | 141.00 | 80.35 | 221.35 |
| 4 | 404 | KOLAR | 71.00 | 45.53 | 116.53 |
| 5 | 405 | SHIMOGA | 363.00 | 126.89 | 489.89 |
| 6 | 406 | TUMKUR | 279.00 | 176.77 | 455.77 |
| 7 | 451 | DAVANAGERE | 359.00 | 141.96 | 500.96 |
| 8 | 452 | RAMANAGARAM | 58.00 | 41.85 | 99.85 |
| 9 | 453 | CHIKBALLAPUR | 58.00 | 69.97 | 127.97 |
| 10 | 407 | MYSORE | 501.00 | 215.95 | 716.95 |
| 11 | 408 | CHIKMAGALUR | 112.00 | 50.55 | 162.55 |
| 12 | 409 | DAKSHINA KANNADA | 208.00 | 113.16 | 321.16 |
| 13 | 410 | HASSAN | 279.00 | 181.46 | 460.46 |
| 14 | 411 | KODAGU | 47.00 | 23.54 | 70.54 |
| 15 | 412 | MANDYA | 279.00 | 172.42 | 451.42 |
| 16 | 456 | CHAMARAJA NAGAR | 85.00 | 55.34 | 140.34 |
| 17 | 457 | UDUPI | 141.00 | 86.71 | 227.71 |
| 18 | 413 | BELGAUM | 473.00 | 254.41 | 727.41 |
| 19 | 414 | BIJAPUR | 334.00 | 146.64 | 480.64 |
| 20 | 415 | DHARWAD | 236.00 | 150 | 386.00 |
| 21 | 416 | UTTARA KANNADA | 168.00 | 102.11 | 270.11 |
| 22 | 461 | BAGALKOT | 252.00 | 130.24 | 382.24 |
| 23 | 462 | GADAG | 147.00 | 113.83 | 260.83 |
| 24 | 463 | HAVERI | 141.00 | 115.17 | 256.17 |
| 25 | 417 | GULBARGA | 417.00 | 122.54 | 539.54 |
| 26 | 418 | BELLARY | 279.00 | 135.59 | 414.59 |
| 27 | 419 | BIDAR | 279.00 | 78.01 | 357.01 |
| 28 | 420 | RAICHUR | 113.00 | 59.26 | 172.26 |
| 29 | 421 | YADGIRI | 58.00 | 39.51 | 97.51 |
| 30 | 466 | KOPPAL | 99.00 | 48.55 | 147.55 |
| | | **Totals** | **7000.00** | **3347.53** | **10347.53** |

12/3/14

**Commissioner**

**Backward Classes Welfare Department**

**Bangalore.**

**E:\Fee Concession- Group-A.docx**